ಕರ್ನಾಟಕ ವಿಧಾನ ಸಭೆ
ಬುಧವಾರ ೧೭ನೇ ಫೆಬ್ರವರಿ ೧೯೯೩
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ ೧೧.೩೦ ಗಂಟೆಗೆ
ಸಮಾವೇಶಗೊಂಡಿತು.
ಅಧ್ಯಕ್ಷರು: (ಶ್ರೀ ಎ.ಎಸ್. ಕೌಜಲಗಿ) ಅವರು
ಪೀಠವನ್ನು ಅಲಂಕರಿಸಿದ್ದರು.

೧) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

೨) ಹೆಚ್ಚಿಸಿರುವ ಸಾರಿಗೆ ದರಗಳನ್ನು ವಾಪಸ್ ಪಡೆಯಲು ಒತ್ತಾಯ.

*ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):- (ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರು). ಸನ್ಮಾನ್ಯ ಅಧ್ಯಕ್ಷರೆ, ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ದರವನ್ನು ಜಾಸ್ತಿ ಮಾಡಿರುವ ಬಗ್ಗೆ ಸರ್ಕಾರ ಅದನ್ನು ಸಂಪೂರ್ಣವಾಗಿ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಮತ್ತು ಅದರ ಬಗ್ಗೆ ಹೌಸ್ ಕಮಿಟಿಯನ್ನು ಮಾಡಬೇಕೆಂದು ಹೇಳುತ್ತಿದ್ದೇವೆ.

೩) (ವಿರೋಧ ಪಕ್ಷದವರು ಧರಣಿ ಕುಳಿತಿದ್ದರು)

ಶ್ರೀ ವಾಟಾಳ್ ನಾಗರಾಜ್:- (ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರು) ಸನ್ಮಾನ್ಯ ಅಧ್ಯಕ್ಷರೆ, ಕೆ.ಎಸ್.ಆರ್.ಟಿ.ಸಿ. ಬಸ್ ದರವನ್ನು ಜಾಸ್ತಿ ಮಾಡಿರುವ ಬಗ್ಗೆ ಸದನದ ಒಂದು ಸಮಿತಿಯನ್ನು ಅತಿ ಮುಖ್ಯವಾಗಿ ಮಾಡಬೇಕಾಗಿದೆ. ಮತ್ತು ಅದರಲ್ಲಿ ಆಗಿರತಕ್ಕ ಅವ್ಯವಹಾರ, ನಡೆಯತಕ್ಕ ವಿಚಾರಗಳ ಬಗ್ಗೆ ಚರ್ಚೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಡತಕ್ಕ ಒಂದು ಸಮಿತಿಯನ್ನು ಮಾಡಬೇಕು, ಸರ್ಕಾರ ಇದರ ಬಗ್ಗೆ ಸ್ವಲ್ಪ ಧಾರಾಳವಾದ ನೀತಿಯನ್ನು ಅನುಸರಿಸಬೇಕು. ಈಗ ಏನು ಕೆ.ಎಸ್.ಆರ್.ಟಿ.ಸಿಯಲ್ಲಿ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ ಅದರಲ್ಲಿ ೭ ಪರ್‌ಸೆಂಟ್‌ನಷ್ಟು ಕಡಿಮೆ ಮಾಡುತ್ತೇವೆಂದು ನಿನ್ನೆ ಹೇಳಿದ್ದೀರಿ, ಆದರೆ ತಾವು ಕಡಿಮೆ ಮಾಡಲು ಹೊರಟಿರುವ ನೀತಿ ಬದಲಾವಣೆಯಾಗಬೇಕು.

*ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ಆಕಡೆಯವರು ಮತ್ತು ಈಕಡೆಯವರೆಲ್ಲರೂ ಒಟ್ಟುಗೂಡಿ, ಅವರುಗಳೆಲ್ಲರ ಒಟ್ಟಾರೆ ಅಭಿಪ್ರಾಯವೇನೆಂದರೆ ಜಾಸ್ತಿ ಮಾಡಿರುವ ಸಾರಿಗೆ ದರವನ್ನು ಸಂಪೂರ್ಣವಾಗಿ ವಾಪಸ್ ತೆಗೆದುಕೊಳ್ಳಬೇಕು; ಸದನದ ಸಮಿತಿಯನ್ನು ಅನೇಕ ಸಲ ಮಾಡಿದ್ದಾರೆ, ಈಗಲೂ ಮಾಡಿ, ಆದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ, ಆದರೆ ಮುಂದೆ ಆಗತಕ್ಕ ನಷ್ಟವನ್ನು ತಪ್ಪಿಸಲು ಮತ್ತು ಜನತೆಗೆ ಒಳ್ಳೆಯ ಸೌಕರ್ಯವನ್ನು ಕೊಡುವ ಬಗ್ಗೆ ಯೋಚನೆ ಮಾಡಬೇಕು. ನಾನು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ನಾನು ನಿನ್ನೆ ದಿನ ಆ ಸಮಯದಲ್ಲಿ ಅನಿವಾರ್ಯ ಕಾರಣದಿಂದ ಇಲ್ಲಿ ಇರಲಿಲ್ಲ, ಆದರೆ ನಮ್ಮ ಕಡೆಯವರು ಮತ್ತು ಎಲ್ಲರೂ ಸಹ ಒಕ್ಕೊರಲಿನಿಂದ ಅದರ ಬಗ್ಗೆ ಹೇಳಿದ್ದಾರೆ. ಆಕಡೆಯವರೆಲ್ಲರೂ ಬರಲು ಆಗಲಿಲ್ಲ ಅದಕ್ಕಾಗಿ ಆಡಳಿತ ಪಕ್ಷದವರು ಬಂದಿಲ್ಲ, ಆದುದರಿಂದ ಸಾರಿಗೆ ದರವನ್ನು ಏನು ಜಾಸ್ತಿ ಮಾಡಿದ್ದೀರಿ ಅದನ್ನು ದಯಮಾಡಿ ಸಂಪೂರ್ಣವಾಗಿ ವಾಪಸ್ ತೆಗೆದುಕೊಂಡು ಸದನದ ಸಮಿತಿಯನ್ನು ಮಾಡಿ ಚರ್ಚೆಯನ್ನು ಮಾಡಲು ಅವಕಾಶ ಮಾಡಿಕೊಡಿ. ಮತ್ತು ವಾಸ್ತವಿಕವಾದ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಈಗ ಇರತಕ್ಕ ನಷ್ಟವನ್ನು ಸರಿಪಡಿಸಿ ಪ್ರಯಾಣಿಕರಿಗೆ

ಅನುಕೂಲ ಮಾಡಿಕೊಡುವುದರ ಮೂಲಕ ತೀರ್ಮಾನವಾಗಬೇಕು. ಸಮಿತಿ ಮಾಡಿ ಚರ್ಚೆ ಮಾಡಿ. ವಾಸ್ತವಿಕ ಅಂಶದ ಬಗ್ಗೆ ವಿಚಾರ ಮಾಡಿ. ಅಲ್ಲಿ ಆಗುತ್ತಿರತಕ್ಕಂತಹ ಲಾಸ್ ಏನು ಇದೆ ಅದನ್ನು ಸರಿಪಡಿಸಿ ಆ ನೀತಿಯ ಬಗ್ಗೆ ವಿಚಾರ ಮಾಡಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಚರ್ಚೆ ಮಾಡಿ. ಪ್ರಯಾಣಿಕರು ಈಗಾಗಲೇ ಹೊರಲಾರದ ಭಾರವನ್ನು ಹೊರುತ್ತಿದ್ದಾರೆ. ಖಂಡಿತ ಇದರಿಂದ ಸರ್ಕಾರಕ್ಕೆ ಒಳ್ಳೆಯದಾಗುವುದಿಲ್ಲ. ಎಷ್ಟೆಷ್ಟು ದರ ಜಾಸ್ತಿ ಮಾಡುತ್ತೀರಿ ಅಷ್ಟು ನಿಮಗೆ ಅನುಕೂಲವಾಗಬಹುದು ಆದರೆ ಜನರಿಗೆ ತೊಂದರೆಯಾಗುತ್ತದೆ. ರಾಜಕೀಯವಾಗಿ ಇದನ್ನು ಮಾಡುವುದಕ್ಕೆ ಬರುವುದಿಲ್ಲ. ಸಾಮಾನ್ಯ ಪ್ರಯಾಣಿಕರಿಗೆ ಗ್ರಾಮೀಣ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಈಗಾಗಲೇ ಸಾರಿಗೆ ದರವನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ಅದು ಜಾಸ್ತಿ ಇದೆ ಎನ್ನುವುದು ಅವರಿಗೇ ಮನದಟ್ಟಾಗಿದೆ. ಅವರ ಸಿ.ಎಲ್.ಪಿ. ಸಭೆಯಲ್ಲೂ ಚರ್ಚೆಯಾಗಿದೆ. ಬಹುಶಃ ಅಡಳಿತ ಪಕ್ಷ ಒಳಕ್ಕೆ ಬರುವುದಕ್ಕೆ ಸಿದ್ಧವಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಪ್ರೆಸ್ಟೀಜಾಗಿ ತೆಗೆದುಕೊಳ್ಳದೆ ಸಾರಿಗೆ ದರವನ್ನು ಸಂಪೂರ್ಣವಾಗಿ ವಾಪಸ್ಸು ಪಡೆಯಬೇಕು. ಸದನ ಸಮಿತಿ ಮೂಲಕ ಆದರ ಲಾಸ್ ಅನ್ನು ಸರಿಪಡಿಸುವುದು ಹೇಗೆ, ಸೋರುವುದನ್ನು ಸರಿಪಡಿಸುವುದು ಹೇಗೆ, ಹೆಚ್ಚು ಅನುಕೂಲವನ್ನು ಜನರಿಗೆ ಮಾಡಿಕೊಡುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ನಾನೂ ಕೂಡ ಅಲ್ಲಿಗೆ ಹೋಗುತ್ತಿದ್ದೇನೆ. (ವೆಲ್‌ಗೆ ಧಾವಿಸಿದರು)

ಶ್ರೀ ವಾಟಾಳ್ ನಾಗರಾಜ್ (ವೆಲ್‌ನಲ್ಲಿ ನಿಂತಿದ್ದರು):- ಇದರ ಬಗ್ಗೆ ತಮ್ಮ ಪಕ್ಷದಲ್ಲೂ ಒತ್ತಾಯ ಬಂದಿದೆ. ಪ್ರಜಾಪ್ರಭುತ್ವಕ್ಕೆ ಬೆಲೆ ಕೊಡಬೇಕಾಗುತ್ತದೆ. ತಾವು ಬೇಗನೆ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಸಭಾಪತಿಗಳೇ, ದರ ಎಲ್ಲಾ ಕಡಿಮೆಯಾಗಬೇಕೆಂದು ನನ್ನದೂ ಅಪೇಕ್ಷೆ ಇದೆ. ಆದರೆ ಸಂಸ್ಥೆ ಕೂಡ ನಡೆಯಬೇಕಾಗುತ್ತದೆ, ಆ ಇಚ್ಛೆ ನಮ್ಮದೂ ನಿಮ್ಮದೂ ಇದೆ. ನಿನ್ನೆ ನಾವು ಪುನಃ ಅನೌನ್ಸ್ ಮಾಡಿದ ಪ್ರಕಾರ ಸಂಸ್ಥೆಗೆ ೪೦ ಕೋಟಿ, ಮತ್ತು ೪೮ ಕೋಟಿ ರೂಪಾಯಿ ನಷ್ಟವಾಗುತ್ತಿದೆ, ಸುಮಾರು ೮೮ ಕೋಟಿ ರೂಪಾಯಿ ಜವಾಬ್ದಾರಿಯನ್ನು ಹೊತ್ತು ಅದನ್ನು ಸುಧಾರಿಸಿ ಸಂಸ್ಥೆಯನ್ನು ನಡೆಸಬೇಕೆಂದು ಈಗಾಗಲೇ ಹೇಳಿದ್ದೇವೆ. ಕೆ.ಎಸ್.ಆರ್.ಟಿ.ಸಿ.ಯವರು ಇದಕ್ಕೆ ಒಪ್ಪಿದ್ದಾರೆ. ಈಗ ನಮ್ಮದು ತೆರೆಗೆ ಮುಕ್ತ ಅಡಳಿತ ಕೊಡುವ ಮನಸ್ಸು. ನಿಗಮಕ್ಕೆ ತಮ್ಮ ಸಲಹೆಗಳಿಂದ ಈ ಸದನ ಸಮಿತಿಯಿಂದ ಸಲಹೆಗಳಿಂದ ಏನಾದರೂ ಸುಧಾರಣೆಗಳು ಆಗುವುದಿದ್ದರೆ, ಅಭಿವೃದ್ಧಿಯಾಗುವುದು ಇದ್ದರೆ, ನಮ್ಮದು ಆಹ್ವಾನವಿದೆ ಅದಕ್ಕೆ ಅಡ್ಡಿ ಬರುವುದಿಲ್ಲ. ನಮಗೆ ತಮ್ಮ ಸಲಹೆಗಳು ಬೇಕು. ದರ ಏರಿಸದೆ ಸುಧಾರಣೆ ಮಾಡಬೇಕೆಂದು ತಾವು ಸಲಹೆ ಕೊಟ್ಟರೆ ಅದಕ್ಕಿಂತ ಸಂತೋಷ ಬೇರೆ ಯಾವುದೂ ಇಲ್ಲ. ಸದನ ಸಮಿತಿ ಮಾಡುವುದಕ್ಕೆ ಈ ಕಡೆ ಆಕ್ಷೇಪಣೆ ಇಲ್ಲ ಸದನದ ಸಮಿತಿ ಮಾಡೋಣ ಯಾವ ರೀತಿ ಮಾಡಬೇಕೆಂದು ಸಂಸದೀಯ ಸಚಿವರು ತಮ್ಮ ಜೊತೆಯಲ್ಲಿ ಮಾತನಾಡಿಕೊಂಡು ಯಾವಾಗ ಘೋಷಣೆ ಮಾಡಬೇಕೋ ಅದನ್ನು ಮಾಡುತ್ತಾರೆ. ಸದನದ ಸಮಿತಿ ಮಾಡುವುದಕ್ಕೆ ಈ ಕಡೆಯಲ್ಲಿ, ಸರಕಾರದ ವತಿಯಿಂದ ಆಕ್ಷೇಪಣೆ ಇಲ್ಲ. ಅದರ ಪ್ರಕಾರ ಅಧ್ಯಯನ ಮಾಡಿ ಅದನ್ನು ಸುಧಾರಣೆ ಮಾಡುವವರಲ್ಲಿ ಟ್ಯಾರಿಫ್ ಸ್ಟ್ರಕ್ಚರ್‌ನಲ್ಲಿ ಯಾವ ರೀತಿ ಟ್ಯಾರಿಫ್ ಹಾಕಬೇಕು ಅದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಸಂಸ್ಥೆ ಸರಕಾರದ್ದು ಅಲ್ಲ. ಇಡೀ ಕರ್ನಾಟಕ ರಾಜ್ಯದ ಜನರ ಸ್ವತ್ತು. ಅದು ಸುಧಾರಿಸಬೇಕು ಮತ್ತೆ ಅದನ್ನು ಶಿಥಿಲಗೊಳಿಸಲಿಕ್ಕೆ ಕೆಲವು ಪ್ರಯತ್ನಗಳನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಪ್ರಯತ್ನ ಮಾಡುತ್ತಿದ್ದಾರೆ ಅದನ್ನು ತಪ್ಪಿಸಬೇಕು. ನ್ಯಾಷನಲೈಸೇಷನ್ ಕಾನ್‌ಸೆಪ್ಟ್, ನಿನ್ನೆ ಹೇಳಿದ ಹಾಗೆ ಈ ಸಂಸ್ಥೆಯನ್ನು ಬಲಪಡಿಸಬೇಕಾಗುತ್ತದೆ. ಮುಂದೆ ಲಿಬರಲೈಸೇಷನ್, ಮಾಡಬೇಕೋ ಖಾಸಗೀಕರಣ ಮಾಡಬೇಕೋ ಅದು ಪ್ರತ್ಯೇಕ. ಈ ಒಂದು ನೀತಿ ವಿಷಯದಲ್ಲಿ ತಾವು ದಯಮಾಡಿ ಸಲಹೆ ಕೊಡಬಹುದು ಸದನ ಸಮಿತಿ ಮಾಡುವುದಕ್ಕೆ ಸರಕಾರದ ಒಪ್ಪಿಗೆ ಕೂಡ

ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- (ವೆಲ್‌ನಲ್ಲಿ ನಿಂತಿದ್ದರು).ಪತ್ರಿಕೆಯಲ್ಲಿ ವರದಿಯಾಗಿರತಕ್ಕಾಂಥಾದ್ದು ಇದೆ. ಇಲ್ಲಿ ರಾಷ್ಟ್ರೀಕರಣ ಮಾಡೋಣವೆಂದು ಹೇಳುತ್ತಿದ್ದೀರಿ, ನಿಮ್ಮ ಪಕ್ಷ, ಸರಕಾರ ಇದಕ್ಕೆ ಬದ್ಧವಾಗಿದೆ ಎಂದು ಹೇಳುತ್ತಿದ್ದೀರಿ. ಆದರೆ ಪತ್ರಿಕೆಯಲ್ಲಿ ಏನು ಬಂದಿದೆ ಎಂದರೆ ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂತಹ ಕೆಲವು ರೂಟುಗಳನ್ನು ಖಾಸಗೀಯವರಿಗೆ ಕೊಡತಕ್ಕಂತಹ ವಿಚಾರ ಮಾಡುತ್ತೇವೆಂದು ಹೇಳಿದ್ದೀರಿ ಅದರ ಬಗ್ಗೆ .....

ಶ್ರೀ ಎಂ. ವೀರಪ್ಪ ಮೊಯಿಲಿ:- ಸದನವ ಸಮಿತಿಯಲ್ಲಿ ಅದರ ಬಗ್ಗೆ ಅಧ್ಯಯನ ಮಾಡಿ. ನಿಮ್ಮ ವರದಿ ಬರುವವರೆಗೆ ನಾವು ಆ ಬಗ್ಗೆ ಯಾವ ನಿರ್ಣಯವನ್ನು ತೆಗೆದುಕೊಳ್ಳುವುದಿಲ್ಲ. ಚರ್ಚೆ ಮಾಡಿ ಅಧ್ಯಯನ ಮಾಡಿ ಸಲಹೆ ಕೊಟ್ಟರೆ ಅದನ್ನು ಸ್ವೀಕಾರ ಮಾಡಬಹುದು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ನಿಮ್ಮ ವರದಿ ಕೊಡುವವರೆಗೆ ನಾವು ಯಾವ ನಿರ್ಣಯವನ್ನೂ ತೆಗೆದುಕೊಳ್ಳುವುದಿಲ್ಲ. ಸಲಹೆ ಕೊಟ್ಟರೆ ಅದನ್ನು ಸ್ವೀಕಾರ ಮಾಡಬಹುದು. (ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ ಬಂದರು)

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಸಭಾ ನಾಯಕರು ವಿರೋಧ ಪಕ್ಷದ ಸದಸ್ಯರು ಹೇಳಿದ ಹಾಗೆ ನಾನು ಸದನ ಸಮಿತಿ ಮಾಡುವುದಕ್ಕೆ ಒಪ್ಪಿದ್ದೇನೆಂದು ಹೇಳಿದರು. ನಾನೂ ಸದನ ಸಮಿತಿ ಮಾಡಲಿಕ್ಕೆ ಒತ್ತಾಯ ಮಾಡಿದೆ ಅದರ ಬಗ್ಗೆ ಮುಂಜಾನೆ ಕರೆದು ಚರ್ಚೆ ಮಾಡಿ ಇದಕ್ಕೆ ಒಪ್ಪಿದ್ದಾರೆ. ಸರಕಾರವನ್ನು ಬಿಕ್ಕಟ್ಟಿನಲ್ಲಿ ತರಬೇಕು, ತೊಂದರೆ ಮಾಡಬೇಕೆಂಬ ಉದ್ದೇಶ ನಮಗೆ ಇಲ್ಲ. ಎಲ್ಲರೂ ಹೇಳಿದ ಹಾಗೆ ಕೆ.ಎಸ್.ಆರ್.ಟಿ.ಸಿ. ವತಿಯಿಂದ ೨-೨ ವರ್ಷಕ್ಕೆ ದರವನ್ನು ಏರಿಸುತ್ತಾ ಅದರ ಭಾರವನ್ನು ಜನಸಾಮಾನ್ಯರ ಮೇಲೆ ಹಾಕುತ್ತಾ ಹೋದರೆ ಕಷ್ಟವಾಗುತ್ತದೆ. ಹಾಗಾಗಿ ಈ ವಿಚಾರದಲ್ಲಿ ಕಾಂಪ್ರೊಹೆನ್ಸೀವ್ ಸ್ಟಡಿ ಆಗಬೇಕಾಗಿದೆ. ಸರ್ಕಾರದ ರಿಪೋರ್ಟ್ ಬಂದಿದೆ, ಅದನ್ನು ನಾವು ನೋಡಿದ್ದೇವೆ. ಆರ್ಮುಗಂ ಕಮಿಟಿ ರಿಪೋರ್ಟ್ ಬಂದಿದೆ. ಅದನ್ನು ಇಂಪ್ಲಿಮೆಂಟ್ ಮಾಡುವುದರಲ್ಲಿ ಸರ್ಕಾರದ ನಿಲುವು ಬೇಕಾಗುತ್ತದೆ. ಇವತ್ತು ಸದನದ ಸಮಿತಿ ಮಾಡಿ ಉಪಯೋಗವಿಲ್ಲ. ನಮಗೆ ಮುಖ್ಯಮಂತ್ರಿಗಳ ಕಡೆಯಿಂದ ಆಶ್ವಾಸನೆ ಬೇಕಾಗಿದೆ. ಸದನದ ಸಮಿತಿ ರಿಪೋರ್ಟ್ ಏನು ಬರುತ್ತದೆ ಅದು ತಾವು ಇನ್‌ಟೋಟೋ ಇಂಪ್ಲಿಮೆಂಟ್ ಮಾಡುವುದರ ಬಗ್ಗೆ ಆಶ್ವಾಸನೆ ಬೇಕಾಗಿದೆ. ಆಗ ಆ ಸಮಿತಿಗೆ ಮಹತ್ವ ಬರುತ್ತದೆ. ಇಲ್ಲದೆ ಇದ್ದರೆ ಸಮಿತಿ ಉಪಯೋಗವಾಗುವುದಿಲ್ಲ. ಆ ದೃಷ್ಟಿಯಿಂದ ನಾನು ತಮ್ಮನ್ನು ಅಭಿನಂದಿಸುತ್ತೇನೆ. ತಾವು ಈಗ ಒಪ್ಪಿಕೊಂಡಿದ್ದೀರಿ. ಆದರೆ ಈ ಬೆಲೆ ಏರಿಕೆಯನ್ನು ತಾವು ಏಳು ಪರ್ಸೆಂಟ್ ಕಡಿಮೆ ಮಾಡಿದ್ದೀರಿ, ಅದರ ಬಗ್ಗೆ ನಮಗೆ ಸಮಾಧಾನ ಇಲ್ಲ. ಅದನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಬಹಳ ದೊಡ್ಡ ಗಧಾ-ಪ್ರಹಾರ, ಬಹಳ ದೊಡ್ಡ ಅನ್ಯಾಯ ಪ್ರಯಾಣಿಕರ ಮೇಲೆ ಸರ್ಕಾರದಿಂದ ಆಗಿದೆ. ಅಷ್ಟೇ ಅಲ್ಲ, ನಾನು ಮುಖ್ಯಮಂತ್ರಿಯವರ ಗಮನಕ್ಕೆ ಒಂದು ಮಾತನ್ನು ತಮ್ಮ ಮುಖಾಂತರ ತಿಳಿಸಲಿಚ್ಚಿಸುತ್ತೇನೆ. ತಾವು ನಿನ್ನೆ ಏಳು ಪರ್ಸೆಂಟ್ ರಿಡಕ್ಷನ್ ಏನು ಅನೌನ್ಸ್ ಮಾಡಿದಿರಿ ಅದು ಮೇಲಿನ ಮನೆಯಲ್ಲಿಯಾಗಲಿ, ಕೆಳಗಿನ ಮನೆಯಲ್ಲಿಯಾಗಲಿ, ಅನೌನ್ಸ್ ಮಾಡುವುದಕ್ಕೆ ಮುಂಚೆ ಪತ್ರಿಕೆಯಲ್ಲಿ ಬಂದಿತ್ತು. ಸಂಜೆವಾಣಿ ಪತ್ರಿಕೆಯಲ್ಲೂ ಬಂದಿತ್ತು. ಪಿ.ಟಿ.ಐ.ಗೆ ಇನ್‌ಫರ್ಮೇಷನ್ ಹೋಗಿತ್ತು. ನಿಮ್ಮ ಪಕ್ಷಕ್ಕೆ ಅದರ ಬಗ್ಗೆ ಏನಾದರೂ ಕ್ರೆಡಿಟ್ ನೀವು ತೆಗೆದುಕೊಳ್ಳುವುದು ಇದ್ದರೆ ನನಗೆ ಅದರದು ವಾದ ಇಲ್ಲ. ಆದರೆ ಇದು ಬರಬಾರದು. ಸದನದಲ್ಲಿ ಇಂತಹ ವಿಷಯಗಳು ಪ್ರಸ್ತಾಪವಾದಾಗ ಆವಾಗಲು ಸದನದಲ್ಲಿ ಚರ್ಚೆ ಆಗಬೇಕಾಗುತ್ತದೆ.

ಅದು ಸದನದಲ್ಲಿಯೇ ಆಗಬೇಕಾಗುತ್ತದೆ. ಹಾಗಾಗಿ ಇನ್ನು ಮುಂದೆ ಇದು ಆಗದಂತೆ ತಾವು

ನೋಡಿಕೊಳ್ಳಬೇಕು. ಅಷ್ಟೇ ಅಲ್ಲ ಮಾನ್ಯ ಸಾರಿಗೆ ಸಚಿವರು ಹೇಳಿದರು ನಾವು ೧೯೭೨ನೇ ಇಸವಿಯಲ್ಲಿ ವಿರೋಧಪಕ್ಷದವರನ್ನು ಕರೆದಿದ್ದೇವೆ, ಮಾತನಾಡಿದ್ದೇವೆ ಎಂದು. ಇವತ್ತು ನಾವು ೧೯೯೩ರಲ್ಲಿ ಇದ್ದೇವೆ. ಇದು ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ತಮಗೆ ವಿಶ್ವಾಸವಿದ್ದರೆ, ಯಾವುದೇ ಒಂದು ಮಹತ್ವದ ನಿರ್ಣಯ ತೆಗೆದುಕೊಳ್ಳುವಾಗ ತಾವು ಆ ಸಮಯದಲ್ಲಿ ವಿರೋಧಪಕ್ಷದವರನ್ನು ಕರೆಯಿಸಿ ಸಲಹೆ ತೆಗೆದುಕೊಂಡರೆ ತಮಗೂ ಲಾಭ ಆಗುತ್ತಿತ್ತು. ಮಾನ್ಯ ಸಿಂಧ್ಯಾರವರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದು ತಮಗೂ ಗೊತ್ತು. ಇನ್ನು ಮುಂದೆಯೂ ಸಹ ಸರ್ಕಾರ ಯಾವುದೇ ಒಂದು ವಿಚಾರ ಮಾಡುವಾಗ ವಿರೋಧ ಪಕ್ಷದವರನ್ನು ಪ್ರಜಾಪ್ರಭುತ್ವದಲ್ಲಿ ವಿಶ್ವಾಸಕ್ಕೆ ತೆಗೆದುಕೊಂಡು ಮುಂದಿದರೆ ಅದು ಸರಿಯಾದಂತಹ ಎಂದು ಕ್ರಮವಾಗುತ್ತದೆ. ಇವತ್ತು ನಿಜವಾಗಿ ನಾವು ಧರಣಿ ಮುಂದುವರೆಸಬೇಕಾಗಿತ್ತು. ಆದರೆ ರಾಜ್ಯದ ಹಿತದೃಷ್ಟಿಯಿಂದ ಹಲವಾರು ಸಮಸ್ಯೆಗಳು ಇವೆ, ಬಹಳ ಜ್ವಲಂತ ಸಮಸ್ಯೆಗಳು ರೈತ ಸಮಸ್ಯೆಗಳು ಇವೆ, ರಾಜ್ಯಪಾಲರ ಭಾಷಣದ ಮೇಲೆ ನಾವು ಮಾತನಾಡಬೇಕಾಗಿದೆ. ತಾವು ಇವತ್ತು ಏನು ಕೆಎಸ್ಆರ್‌ಟಿಸಿ ದರ ಕಡಿಮೆ ಮಾಡಿದ್ದೀರಿ ಅದು ನಮಗೆ ಸಂತೋಷವಾಗಿಲ್ಲ, ಇದಕ್ಕೆ ನಮ್ಮ ವಿರೋಧವಿದ್ದರೂ ಸಹ ನಾವು ಈ ಮನೆಯಲ್ಲಿ ಸಹಕರಿಸಬೇಕು, ಬಹಳ ಮುಖ್ಯವಾದ ವಿಷಯದ ಮೇಲೆ ನಾವು ಚರ್ಚೆ ಮಾಡಬೇಕಾಗಿದೆ ಎಂದು ತಿಳಿದುಕೊಂಡು ನಮ್ಮ ಧರಣಿಯನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಈಗ ಸರ್ಕಾರದವರು ನಿನ್ನೆಯ ದಿವಸ ಸಿಎಲ್‌ಪಿ ಮೀಟಿಂಗ್‌ನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಬಸ್ ಮಾರ್ಗಗಳನ್ನು ಖಾಸಗೀಕರಣ ಮಾಡುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಆದರೆ ಇಲ್ಲಿ ಏನು ಹೇಳುತ್ತಿದ್ದೀರಿ, ಇಲ್ಲ, ನಾವು ರಾಷ್ಟ್ರೀಕರಣ ಮಾಡತಕ್ಕಂತಹ ನೀತಿಗೆ ಬದ್ಧರಾಗಿದ್ದೇವೆ, ಕೆಲವು ಹಿತಾಸಕ್ತಿಗಳು ಇವೆ ಅವರು ಒತ್ತಡ ತರುತ್ತಿದ್ದಾರೆ, ಆದುದರಿಂದ ಕೆಎಸ್ಆರ್‌ಟಿಸಿ ಯೂಸ್‌ಲೆಸ್, ಇದು ವೈಟ್ ಎಲಿಫೆಂಟ್ ಇದನ್ನ ಮುಗಿಸಿಬಡಬೇಕು ಎನ್ನತಕ್ಕಂತಹ ಒಂದು ತಂತ್ರ ನಡೆಯುತ್ತಾ ಇದೆ. ಅವರಿಗೆ ನಾವು ಯಾರೂ ಸಹ ಪುರಸ್ಕಾರವನ್ನು ಅಪ್ರತ್ಯಕ್ಷವಾಗಿ ಕೊಡಬಾರದು ಎನ್ನತಕ್ಕಂತಹ ಮಾತನ್ನು ಹೇಳುತ್ತೀರೋ? ನನಗೆ ಒಂದು ವಿವರಣೆ ಬೇಕು. ನೀವು ಖಾಸಗೀಯವರಿಗೆ ಗ್ರಾಮೀಣ ಪ್ರದೇಶದಲ್ಲಿ ಬಸ್ ಮಾರ್ಗಗಳನ್ನು ಕೊಡಬೇಕು ಎಂದು ಇದ್ದೀರಾ? ಏಕೆ ಕೊಡಬೇಕು ಎಂದು ಇದ್ದೀರಿ? ನೀವು ಖಾಸಗೀಯವರಿಗೆ ಕೊಡಲೇಬೇಕು ಎಂದು ಇದ್ದರೆ ಬಿಟಿಎಸ್‌ನ್ನು ಕೊಡಿ. ಯಾವ ಖಾಸಗೀಯವರು ಬರುತ್ತಾರೆ, ಬಂದು ತೆಗೆದುಕೊಳ್ಳುತ್ತಾರೆ ನೋಡೋಣ. ಯಾವ ಖಾಸಗೀಯವರು ಬಂದು ಅದನ್ನು ತೆಗೆದುಕೊಳ್ಳುವುದಕ್ಕೆ ತಯಾರು ಇಲ್ಲ. ಬಂದು ಎಲ್ಲಿ ದುಡ್ಡು ಇದೆ ಅಲ್ಲಿ ಮಾತ್ರ ಖಾಸಗೀಕರಣದವರು ಬಂದು ಕೇಳತಕ್ಕಂಥಾದ್ದು ಇದೆ. ಎರಡನೆಯದಾಗಿ ನಾನು ನಿಮಗೆ ಕನ್‌ವಿನ್ಸ್ ಮಾಡಿದ್ದೇನೆ. ನೀವು ಏನು ತೊಂಭತ್ತು ಕೋಟಿ ಲಾಸ್ ಎಂದು ಹೇಳುತ್ತಿದ್ದೀರಿ ಅದರಲ್ಲಿ ೮೦ ಕೋಟಿಗೆ ತಾವು ಈಗ ಮಾರ್ಚ್ ೧೫ಕ್ಕೆ ಡೆಡ್‌ಲೈನ್ ಹಾಕಿದ್ದೀರಿ. ೧೯೯೩ ಮಾರ್ಚ್ ೧೫ರ ಒಳಗಡೆ ಇದನ್ನು ಸೆಟ್‌ರೈಟ್ ಮಾಡುತ್ತೇನೆ ಎಂದು ಹೇಳಿದಿರಿ. ಅದು ಕಷ್ಟಕರವಾದ ಕೆಲಸ. ಅದು ೧೨ ತಿಂಗಳು ಆದರೂ ಸಹ ಬೇಕಾಗುತ್ತದೆ. ೧೨ ತಿಂಗಳವರೆಗೆ ನೀವು ೨೫ ಪರ್ಸೆಂಟ್ ಮಾಡತಕ್ಕಂಥ ಅವಶ್ಯಕತೆ ಇಲ್ಲ ಎನ್ನತಕ್ಕಂತಾದ್ದು ನಮ್ಮ ವಾದ. ನಾನು ಕನ್‌ವಿನ್ಸ್ ಮಾಡಿದ್ದೇನೆ. ೮೦ ಕೋಟಿಯನ್ನು ನೀವು ಸಂಪಾದನೆ ಮಾಡಬಹುದು ಅಂತ ಹೇಳಿದ್ದೇನೆ. ೨೫ ಪರ್ಸೆಂಟ್ ಇದ್ದಿದ್ದು ೭ ಪರ್ಸೆಂಟ್ ಕಡಿಮೆ ಮಾಡಿದ್ದೇವೆ ಎಂದು ತಾವು ಹೇಳುತ್ತಿದ್ದೀರಿ. ಬಿಟಿಎಸ್‌ನಲ್ಲಿ ಒಂದು ರೂಪಾಯಿ ಸಹ ನೀವು ಕಡಿಮೆ ಮಾಡಿಲ್ಲ. ನಗರ ಸಾರಿಗೆಯಲ್ಲಿ ೭ ಪರ್ಸೆಂಟ್ ಕಡಿಮೆ ಮಾಡಿದ್ದೀರಿ? ಈಗ ೧೨ ಜನ ಎಂಎಲ್‌ಎಗಳಲ್ಲಿ ನಿಮ್ಮ ಪಾರ್ಟಿಯವರು ಗೆದ್ದು ಬಂದಿದ್ದಾರೆ.

ಅವರು ಏನು ಮಾಡುತ್ತಾ ಇದ್ದಾರೋ ನನಗಂತೂ ಗೊತ್ತಿಲ್ಲ. ಇವತ್ತು ಜನ ಇದನ್ನು ಸಹಿಸುವುದಿಲ್ಲ. ನಾನು ನಿಮಗೆ ಇನ್ನೊಮ್ಮೆ ಒತ್ತಾಯ ಮಾಡುತ್ತಿದ್ದೀನಿ ದಯವಿಟ್ಟು ಬಿಟಿಎಸ್ ದರಗಳನ್ನು ಸಹ ಕಡಿಮೆ ಮಾಡಬೇಕು. ಈಗ ಹೌಸ್ ಕಮಿಟಿ ಮಾಡಬೇಕು ಎಂದು. ನಾವು ಒತ್ತಾಯ ಮಾಡಿದ್ದೇವೆ. ನೀವು ಹೇಳಿದ್ದೀರಿ. ಆ ಸಮಿತಿಯು ಕಾಂಪ್ರೆಹೆನ್ಸೀವ್ ಸ್ಟಡಿ ಮಾಡಿದ ಮೇಲೆ ರಿಪೋರ್ಟ್ ಕೊಡಲಿ. ಅಷ್ಟರಲ್ಲಿ ನಿಮ್ಮ ಸರ್ಕಾರ ಇದ್ದರೆ ಇಂಪ್ಲಿಮೆಂಟ್ ಮಾಡುವುದೋ ಬಿಡುವುದೋ ಆಗುತ್ತದೆ. ಇಲ್ಲದಿದ್ದರೆ ಅದು ಕಣ್ಣು ಒರೆಸತಕ್ಕ ಕೆಲಸ ಆಗುತ್ತದೆ.

ಶ್ರೀ ಆರ್.ಎ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನಿನ್ನೆ ಒಂದು ಮಾತನ್ನು ಮುಖ್ಯಮಂತ್ರಿಯವರು ಹೇಳಿದ್ದಾರೆ. ಏರಿಸಿರುವ ಬಸ್ ದರವನ್ನು ಶೇಕಡ ೭ರಷ್ಟು ಕಡಿಮೆ ಮಾಡಿದರೂ ಸಹ ಪೂರ್ಣ ಚರ್ಚೆ ಮಾಡಲು ತಯಾರು ಇದ್ದೇವೆ ಎಂದು. ತಾವು ನಿನ್ನೆ ಸಂಜೆ ಈ ಮಾತನ್ನು ಹೇಳಿದ್ದೀರಿ. ಇವರ ಬಗ್ಗೆಯೂ ತಾವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವು ಬಿಜೆಪಿಯವರು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ವಿಷಯವನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇವೆ. ಹೊರಗಡೆ ಇರತಕ್ಕ ಸಾಮಾನ್ಯ ಜನರು ನಮ್ಮನ್ನು ಅಪಾರ್ಥ ಮಾಡಿಕೊಳ್ಳಬಾರದು. ನೀವು ಶೇಕಡ ೨೫ರಷ್ಟು ಏರಿಸಿ ಕೇವಲ ಶೇಕಡ ೭ರಷ್ಟು ಇಳಿಸಿದ್ದೀರಿ. ಈ ರೀತಿ ಶೇಕಡ ೭ ಪರ್ಸೆಂಟ್ ಇಳಿಸಿರುವುದು ಯಾವ ಧರ್ಮ. ಇದರಿಂದ ನಿಜವಾಗಿಯೂ ಜನರಿಗೆ ವಂಚನೆ ಮಾಡಿದಂತಾಗಿದೆ. ಸದನದ ಸಮಿತಿ ಮಾಡುತ್ತೀರೋ ಬಿಡುತ್ತೀರೋ ನಿಮಗೆ ಬಿಟ್ಟಿರುವುದು. ಸದನದ ಸಮಿತಿ ವರದಿಗಳಿಂದ ಯಾವುದೇ ಉಪಯೋಗವಾಗುವುದಿಲ್ಲ. ಸದನದ ಸಮಿತಿ ಮಾಡುವುದಾದರೆ ಮಾಡಿ, ಆದರೆ ಆ ಸಮಿತಿ ತನ್ನ ವರದಿಯನ್ನು ಕೊಡುವವರೆಗೆ ನೀವು ಏರಿಸಿರುವ ದರವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಸಮಿತಿಯು ಕೊಟ್ಟ ವರದಿಯ ಆಧಾರದಮೇಲೆ ನಿಮಗೆ ಸರಿಪಡಿಸಲು ಅವಕಾಶವಿದೆ. ಈ ಏರಿಸಿರುವ ದರವನ್ನು ಪೂರ್ತಿಯಾಗಿ ವಾಪಸ್ಸು ತೆಗೆದುಕೊಳ್ಳದಿದ್ದರೆ ಈ ಸರ್ಕಾರದ ನೀತಿಯನ್ನು ಸಂಪೂರ್ಣವಾಗಿ ಖಂಡಿಸಿ ಬಿಜೆಪಿಯವರಾದ ನಾವು ವಾಕ್‌ಔಟ್ ಮಾಡಬೇಕಾಗುತ್ತದೆ. ನೀವು ಶೇಕಡ ೭ರಷ್ಟು ಕಡಿಮೆ ಮಾಡಿ ಜನರಿಗೆ ವಂಚನೆ ಮಾಡಿದ್ದೀರಿ ಎಂದು ಹೇಳಿ ನಿಮ್ಮ ನೀತಿಯನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ಆರ್.ಎ. ದೇಶಪಾಂಡೆ:- ನಾವು ನಮ್ಮ ಕರ್ತವ್ಯವನ್ನು ಮಾಡಬೇಕಾಗಿದೆ. ಈ ಬಗ್ಗೆ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಮ್ಮ ಮಾತಿಗೆ ನಾವು ಗೌರವ ಕೊಟ್ಟಿದ್ದೇವೆ. ಇಲ್ಲಿ ನಾವು ನಮ್ಮ ಧರಣಿಯನ್ನು ಹಿಂದಕ್ಕೆ ತೆಗೆದುಕೊಂಡಿರತಕ್ಕದ್ದು ಬಹಳ ಸಂತೋಷದಿಂದ ಇಲ್ಲ. ನಮಗಂತೂ ನಿಜವಾಗಿಯೂ ಇದರಲ್ಲಿ ನಂಬಿಕೆ ಇಲ್ಲ. ನನಗೆ ಬಹಳ ವ್ಯಥೆಯಾಗಿದೆ. ನಾವು ಯಾವ ಪುರುಷಾರ್ಥಕ್ಕಾಗಿ ಧರಣಿಯನ್ನು ಹಿಂದಕ್ಕೆ ತೆಗೆದುಕೊಂಡಿದ್ದೇವೆ ಎಂದು ನನಗೆ ಅನ್ನಿಸುತ್ತದೆ. ಇಲ್ಲಿ ಮಿಕ್ಕ ಎಲ್ಲಾ ಕಾರ್ಯಕಲಾಪಗಳಲ್ಲಿ ಭಾಗವಹಿಸದೆ ವಂಚಿತರಾಗುತ್ತೇವೆ ಎನ್ನುವ ಪರಿಸ್ಥಿತಿ ಇರುವುದರಿಂದ ನಾವು ಈ ಕ್ರಮವನ್ನು ಕೈಗೊಂಡಿದ್ದೇವೆಯೇ ಹೊರತು ಬೇರೆ ಏನೂ ಅಲ್ಲ. ಈ ಬಗ್ಗೆ ನನಗೆ ಯಾವುದೇ ಆಶಾಭಾವನೆ ಅಥವಾ ಭರವಸೆ ಇಲ್ಲ. ದರವನ್ನು ಶೇಕಡ ೨೫ರಷ್ಟು ಏರಿಸಿ ಮತ್ತೇ ಶೇಕಡ ೭ರಷ್ಟು ಇಳಿಸಿರುವುದಕ್ಕೆ ಸರಿಯಾದ ವೈಜ್ಞಾನಿಕ ವಾದ ಆಧಾರಗಳಿಲ್ಲದೆ, ಸಾರಾಸಗಟು ಏಳು ಪರ್ಸೆಂಟು ಯಾವುದೇ ಮಾತುಕತೆ ನಮ್ಮ ಜೊತೆ ಇಲ್ಲದೆ ಇಳಿಸಿದ್ದೀರಿ. ಹಾಗೇ ಏರಿಸುವಾಗಲೂ ನಮ್ಮ ಜೊತೆ ಮಾತನಾಡಲಿಲ್ಲ. ವಿರೋಧಪಕ್ಷದವರನ್ನು ಕಗ್ಗತ್ತಲೆಯಲ್ಲಿಟ್ಟು ಈ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಸರ್ಕಾರದ ಈ ನೀತಿ ಸರಿಯಲ್ಲ.

ಸರ್ಕಾರ ಸದನದ ಸಮಿತಿ ಮಾಡುತ್ತಿದೆ ಅದಕ್ಕೆ ನಮ್ಮ ವಿರೋಧ ಇಲ್ಲ. ಆದರೆ ನಮ್ಮ ಮೂಲಭೂತವಾದ ಪ್ರಶ್ನೆ ವಿರಿಸಿರುವ ಬೆಲೆಯನ್ನು ೨೫ ಪರ್ಸೆಂಟ್ ಕಡಿಮೆ ಮಾಡಿ, ಸಂಪೂರ್ಣವಾಗಿ ಕೈ ಬಿಡಬೇಕು. ಸದನದ ಸಮಿತಿ ವರದಿ ಬರುವವರೆಗೂ ಇದನ್ನು ಜಾರಿಗೆ ಕೊಡಬಾರದು ಎಂದು ನಾನು ಒತ್ತಾಯ ಮಾಡುತ್ತೇನೆ. ಬೆಂಗಳೂರಿನ ಜನ ಏನು ಪಾಪ ಮಾಡಿದ್ದಾರೆ. ೪೫ ಲಕ್ಷ ಜನ ಇರತಕ್ಕ ಬೆಂಗಳೂರು ನಗರದಲ್ಲಿ ಸಾರಿಗೆ ದರವನ್ನು ಇಳಿಸದೆ ಹೊರಗಡೆ ಇಳಿಸಿರತಕ್ಕದ್ದು ಯಾವ ನೀತಿ. ಆದರಲ್ಲೂ ೩೦೦ ಕಿ.ಮೀ. ಮೇಲೆ ಹೋಗತಕ್ಕವರಿಗೆ ಇಳಿಸಿರುವುದು ಬಡವರಿಗೆ ಹಾಗೂ ಜನಸಾಮಾನ್ಯರಿಗೆ ಅನುಕೂಲವಾಗತಕ್ಕ ನೀತಿಯಲ್ಲ. ಸರ್ಕಾರ ಇವೊತ್ತು ಸದನದ ಸಮಿತಿ ಮಾಡಿರುವುದು ಅಲ್ಲಿ ನಡೆದಿರತಕ್ಕ ಅವ್ಯವಹಾರಗಳನ್ನು ಸರ್ಕಾರಕ್ಕೆ ತಿಳಿಸಿ, ಅದನ್ನು ಸರಿಪಡಿಸಿ, ಸರ್ಕಾರ ಅದರಿಂದ ಲಾಭ ಪಡೆಯುವುದಕ್ಕೋಸ್ಕರ. ಆದರೆ, ಸರ್ಕಾರದ ಈ ಬೆಲೆ ವಿರಿಕೆಯ ನೀತಿಯನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಜೊತೆಗೆ ರಾಜ್ಯಾದ್ಯಂತ ಏನು ಚಳವಳಿ ನಡೆಯುತ್ತಿದೆ ಆ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕ ಪ್ರಶ್ನೆ ಇಲ್ಲ. ನಾವೂ ಸಹ ಆ ಚಳುವಳಿಗೆ ಬೆಂಬಲ ಕೊಡುತ್ತೇವೆ. ಆ ಚಳುವಳಿ ಯಶಸ್ವಿಯಾಗಿ ನಡೆಯಲಿ, ಸರ್ಕಾರದ ನೀತಿ ಬಗ್ಗೆ ನನಗಂತೂ ಯಾವುದೇ ಅಭಿಮಾನ ಇಲ್ಲ. ಅವರ ಹೇಳಿಕೆಗಳಲ್ಲಿ ನಂಬಿಕೆ ಇಲ್ಲ. ಆದ್ದರಿಂದ ಈಗಲೂ ಸಹ ಸರ್ಕಾರವನ್ನು ಸ್ಪಷ್ಟವಾಗಿ ಒತ್ತಾಯ ಪಡಿಸುತ್ತೇನೆ. ಈಗ ಏನು ಶೇಕಡ ೨೫ರಷ್ಟು ಬಸ್ ದರಗಳನ್ನು ವಿರಿಸಿದ್ದೀರಿ ಅದನ್ನು ಕೂಡಲೇ ಹಿಂದಕ್ಕೆ ಪಡೆದುಕೊಂಡಿದ್ದೇವೆಂದು ಅವರು ಉತ್ತರದಲ್ಲಿ ಹೇಳಬೇಕು ಎಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಸಭಾಧ್ಯಕ್ಷರೆ, ನಾವು ಪರಸ್ಪರ ಸಂಘರ್ಷಣೆ ಮಾಡಬೇಕು ಎಂದು ಹೇಳುತ್ತಾ ಇಲ್ಲ. ಇದು ಯಾವ ತರ್ಕದಲ್ಲಿ ಆಗಿದೆ ಎಂಬುದು ಗೊತ್ತಿಲ್ಲ. In fact, B.T.S., is subsidised by the rural area. ಗ್ರಾಮಾಂತರಕ್ಕಿಂತ ಬೆಂಗಳೂರು ನಗರದಲ್ಲಿ ದರ ಈಗಾಗಲೇ ಕಡಿಮೆ ಇದೆ. ಅದರ ಬಗ್ಗೆ ನಾನು ಭಾಷಣ ಮಾಡಲು ಹೋಗುವುದಿಲ್ಲ. In fact, urban people should subsidise the rural people. It is the other way about. The rural people are subsidising the urban people. ಇದು ಆಗಿದೆ. ಅದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆಮಾಡೋಣ. ಎಲ್ಲರ ಅಭಿಪ್ರಾಯಗಳಿಗೆ ಸ್ಪಂದಿಸುವ ರೀತಿಯಲ್ಲಿ ಚರ್ಚೆ ಮಾಡೋಣ. ಈ ಬಗ್ಗೆ ನಮ್ಮ ಪಕ್ಷದಲ್ಲಿ ವಿಚಾರ ಮಾಡಿದ್ದೇವೆ, ಸಾರ್ವಜನಿಕವಾಗಿ ವಿಚಾರ ಮಾಡಿದ್ದೇವೆ. ನಮ್ಮ ವಿಚಾರಗಳನ್ನು ಸಂಗ್ರಹಮಾಡಿಕೊಂಡು ನಾವು ದರ ನಿಗದಿ ಮಾಡುವಾಗ ವೈಜ್ಞಾನಿಕವಾಗಿ ನಿಗದಿ ಮಾಡಿದ್ದೇವೆ. ನೋಡೋಣ ಈಗ ಸದನದ ಸಮಿತಿ ಇದೆ. ಅವರು ಅದರ ಬಗ್ಗೆ ಚರ್ಚೆ ಮಾಡಿ ಒಂದು ವರದಿ ಕೊಟ್ಟ ಮೇಲೆ ಮುಂದೆ ಯಾವ ರೀತಿ ಸುಧಾರಣೆ ಮಾಡಬೇಕು, ದರ ನಿಗದಿ ಮಾಡಬೇಕು ಎನ್ನುವ ಬಗ್ಗೆ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರೋಣ. ಈಗ ಒಂದು ರೀತಿ ಭಯ. ಶಂಕೆ, ಕರ್ನಾಟಕ ರಸ್ತೆ ಸಾರಿಗೆ ನಿಗಮದ ಮೇಲೆ ಇರುವಾಗ ಮತ್ತೆ ನಾವು ಅದನ್ನು ಶಿಥಿಲಗೊಳಿತುವಂತಹ, ಅಭದ್ರಗೊಳಿತುವಂತಹ ಪರಿಸ್ಥಿತಿಗೆ ಹೋದರೆ ರಾಜ್ಯದ ಹಿತಕ್ಕೆ ಧಕ್ಕೆ ಬರುತ್ತದೆ ಏಕೆಂದರೆ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಬಸ್ಸುಗಳನ್ನು ಕೊಡಬೇಕು ಎನ್ನುವ ಒಂದು ಉದ್ದೇಶ ಇದೆ. ಆದ್ದರಿಂದ ತಾತ್ಕಾಲಿಕವಾಗಿ ಕೆಲವು ವಿಚಾರಗಳಿಗೆ ಹೊಂದಿಕೊಂಡು ಹೋಗಬೇಕಾಗುತ್ತದೆ. ಈ ದೃಷ್ಟಿಯಿಂದ ವಿರಿಕೆ ಮಾಡಿದ್ದೇ ಹೊರತು ಲಾಭ ಪಡೆಯಬೇಕೆಂದು ಸರ್ಕಾರಕ್ಕಾಗಲೀ, ನಿಗಮಕ್ಕಾಗಲೀ, ಇದನ್ನು ಮಾಡಲಿಲ್ಲ. ಇದನ್ನು ಭದ್ರಗೊಳಿಸಬೇಕೆಂಬ ಉದ್ದೇಶದಿಂದ ಮಾಡಿದ್ದೇವೆ. ಈಗ ಆಗಲೇ ಸದನದ ಸಮಿತಿ ಘೋಷಣೆಯಾಗಿದೆ. ಆದುದರಿಂದ ಇಲ್ಲಿಗೆ ಈ ಚರ್ಚೆ ಮುಕ್ತಾಯವಾಗಬೇಕು.

ಶ್ರೀ ವಾಟಾಳ್ ನಾಗರಾಜ್:- ಮುಖ್ಯಮಂತ್ರಿಗಳಿಂದ ಒಳ್ಳೆಯ ಭರವಸೆ ಬರಲಿಲ್ಲ.

ಬೆಂಗಳೂರಿನ ಬಗ್ಗೆ ಕಾಳಜಿ ಇಲ್ಲ. ಬಸ್ಸು ದರವನ್ನು ವೈಜ್ಞಾನಿಕವಾಗಿ ನಿಗದಿ ಮಾಡಿ, ನಿಮ್ಮ ಬಗ್ಗೆ ನಮಗೆ ವೈಯಕ್ತಿಕವಾಗಿ ವಿರೋಧವಿಲ್ಲ. ನಿಮ್ಮ ಸರ್ಕಾರದ ನೀತಿ ಒಳ್ಳೆಯದಾಗಿಲ್ಲ ಎಂದು ನಾನು ಹೇಳಿ ಸಭಾತ್ಯಾಗ ಮಾಡುತ್ತಿದ್ದೇನೆ. ಪ್ರಾಮಾಣಿಕವಾಗಿ ಇದು ನಿಮ್ಮ ಮನಸ್ಸಿಗೆ ಒಪ್ಪಿಗೆಯಾಗಿದೆಯೇ ಎಂದು ಕಳಕಳಿಯಿಂದ ಕೇಳುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಅಸಮಾಧಾನವನ್ನುಂಟು ಮಾಡಿದೆ. ವಿಶೇಷವಾಗಿ ಬಸ್ಸು ದರ ಏರಿಸುವುದಕ್ಕೆ ಮುಂಚೆ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಇವತ್ತು ವಿರಿಸಿದ ದರಗಳನ್ನು ವಿತ್‌ಡ್ರಾ ಮಾಡಿ ಅಸೆಂಬ್ಲಿಯನ್ನ್ಸಲ್ಲಿ ಅಂದರೆ ಅದಕ್ಕೆ ಒಪ್ಪುವುದಿಲ್ಲ. ಇವತ್ತು ಬೆಂಗಳೂರು ಜನತೆಗೆ ರೂರಲ್ ವಿರಿಯಾದವರು ಸಬ್ಸಿಡೈಸ್ ಮಾಡುತ್ತಿದ್ದಾರೆಂದು ಹೇಳುವುದು ಸರಿಯಲ್ಲ. ಬಸ್ಸಿನ ದರದ ಭಾರ ಸಾಕಷ್ಟು ಬೆಂಗಳೂರಿನ ಜನತೆಯ ಮೇಲೆ ಬಿದ್ದಿದೆ. ಬೆಂಗಳೂರು ಜನ ಬಹಳ ಕಷ್ಟದಲ್ಲಿದ್ದಾರೆ. ರಾಜ್ಯದ ರೈತರು ಸಾಮಾನ್ಯ ಜನರು ಕಷ್ಟದಲ್ಲಿದ್ದಾರೆ. ಬರಗಾಲ ಇದೆ, ನೆರೆಹಾವಳಿ ಆಯಿತು, ಸಕ್ಕರೆ ಬೆಲೆ ೧.೪೦ ಪೈಸೆಗಳು ಹೆಚ್ಚಿದೆ. ಇಷ್ಟೆಲ್ಲಾ ಆಗಿದ್ದರೂ ಸರ್ಕಾರದ ಅಮೆಂಡ್‌ಮೆಂಟ್ ನೀತಿಯನ್ನು ನೋಡಿದಾಗ ನಮ್ಮ ಮನಸ್ಸಿಗೆ ಬೇಸರವಾಗಿದೆ. ಆದುದರಿಂದ ನಮ್ಮ ಪಕ್ಷದವರು ವಾಕ್‌ಔಟ್ ಮಾಡುತ್ತಿದ್ದೇವೆ.

(ವಿರೋಧಪಕ್ಷದ ನಾಯಕರು, ಜನತಾದಳ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ವೀರಪ್ಪಮೊಯಿಲಿ:- ಅವರನ್ನು ಫಾಲೋ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ:- ಮೊದಲು ಯಡಿಯೂರಪ್ಪ ಹೋದರು, ನಂತರ ಶ್ರೀ ವಾಟಾಳ್ ನಾಗರಾಜ್ ಹೋದರು.

Sri R.V. Deshapande:- We are not following them.

(Interruptions)

SRI R.V. DESHAPANDE: They have no decensy. I have to hear you first.

SRI M. VEERAPPA MOILY: You are following the other Party.

(interruptions)

SRI R.V. DESHAPANDE: If that is your argument, then I would not have allowed you to speak. That is not the decency. I have to hear you first. Otherwise, it will be undemocratic, and un-parliamentary.

(Interruptions)

ಅಧ್ಯಕ್ಷರು:- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ದರದ ವಿರಿಕೆ ಬಗ್ಗೆ ವಿರೋಧಪಕ್ಷದ ನಾಯಕರು, ಮತ್ತು ವಿವಿಧ ಪಕ್ಷಗಳ ಸದಸ್ಯರುಗಳು ಸಲ್ಲಿಸಿದ ನಿಲುವಳಿ ಸೂಚನೆಯ ಅನುಷ್ಠಾನ ಕೋರಿಕೆಯ ಬಗ್ಗೆ ಸರಕಾರದವರು ಉತ್ತರಿಸಿದ ಪ್ರಯುಕ್ತ ನಿಲುವಳಿ ಸೂಚನೆಗೆ ಅನುಮತಿಯನ್ನು ನಿರಾಕರಿಸಲಾಗಿದೆ.